# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : 2390 |
| **ಸದಸ್ಯರ ಹೆಸರು** | : ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸುವವರು** | : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |
| **ಉತ್ತರಿಸಬೇಕಾದ ದಿನಾಂಕ** | : 27.03.2026. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಅಂಗನವಾಡಿ ಕೇಂದ್ರಗಳ ಮೂಲಕ ಮಕ್ಕಳಿಗೆ, ಗರ್ಭಿಣಿ ಮಹಿಳೆಯರಿಗೆ ಹಾಗೂ ಬಾಣಂತಿಯರಿಗೆ ಪ್ರಸ್ತುತ ನೀಡಲಾಗುತ್ತಿರುವ ಪೌಷ್ಟಿಕ ಆಹಾರ ಪದಾರ್ಥಗಳು ಯಾವುವು; ಪ್ರತಿ ವರ್ಗಕ್ಕೆ ನೀಡಲಾಗುವ ಆಹಾರದ ಪ್ರಮಾಣ ಎಷ್ಟು; ವಾರದಲ್ಲಿ / ತಿಂಗಳಲ್ಲಿ ಎಷ್ಟು ದಿನ ಪೂರೈಕೆ ಮಾಡಲಾಗುತ್ತದೆ; (ವಿವರ ಒದಗಿಸುವುದು) | ರಾಜ್ಯದ ಅಂಗನವಾಡಿ ಕೇಂದ್ರಗಳ ಮೂಲಕ ಮಕ್ಕಳಿಗೆ, ಗರ್ಭಿಣಿ ಮಹಿಳೆಯರಿಗೆ ಹಾಗೂ ಬಾಣಂತಿಯರಿಗೆ ಪ್ರಸ್ತುತ ನೀಡಲಾಗುತ್ತಿರುವ ಪೌಷ್ಟಿಕ ಆಹಾರ ಪದಾರ್ಥಗಳ ವಿವರವನ್ನು **ಅನುಬಂಧದಲ್ಲಿ** ಒದಗಿಸಿದೆ. |
| ಆ) | ಪೌಷ್ಟಿಕ ಆಹಾರ ಪೂರೈಕೆಗಾಗಿ ರಾಜ್ಯ ಸರ್ಕಾರವು ವರ್ಷಕ್ಕೆ ಖರ್ಚು ಮಾಡುತ್ತಿರುವ ಒಟ್ಟು ವೆಚ್ಚ ಎಷ್ಟು; ಕಳೆದ ಮೂರು ವರ್ಷಗಳ (2023-24 ರಿಂದ 2025-26) ವೆಚ್ಚದ ವಿವರ ಒದಗಿಸುವುದು; | ಪೌಷ್ಟಿಕ ಆಹಾರ ಪೂರೈಕೆಗಾಗಿ ರಾಜ್ಯ ಸರ್ಕಾರವು ಪ್ರತಿ ವರ್ಷವು ಫಲಾನುಭವಿಗಳಿಗೆ ಅನುಗುಣವಾಗಿ ವೆಚ್ಚ ಮಾಡುತ್ತಿದೆ.<br><br>ಕಳೆದ ಮೂರು ವರ್ಷಗಳ ವೆಚ್ಚದ ವಿವರ ಈ ಕೆಳಕಂಡಂತಿದೆ:<br><br>**ಆರ್ಥಿಕ ಸಾಲು** — **ವೆಚ್ಚ (ರೂ.ಲಕ್ಷಗಳಲ್ಲಿ)**<br>2023-24 — 174387.93<br>2024-25 — 100270.18<br>2025-26 — 110228.95 |
| ಇ) | ರಾಜ್ಯದ ಕೆಲ ಪ್ರದೇಶಗಳಲ್ಲಿ ಕಳಪೆ ಗುಣಮಟ್ಟದ ಪೌಷ್ಟಿಕ ಆಹಾರ ಪೂರೈಕೆ ಆಗುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಜಿಲ್ಲಾವಾರು ವಿವರ ಒದಗಿಸುವುದು; | ಅಂಗನವಾಡಿ ಕೇಂದ್ರಗಳಿಗೆ ಪೂರಕ ಪೌಷ್ಟಿಕ ಆಹಾರ ವಿತರಿಸುವ ಮುನ್ನ ಆಹಾರ ಪದಾರ್ಥಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ, ಸೇವಿಸಲು ಯೋಗ್ಯ ಎಂಬ ವರದಿ ಬಂದ ನಂತರವೇ ಉತ್ತಮ ಗುಣಮಟ್ಟದ ಪೂರಕ ಪೌಷ್ಟಿಕ ಆಹಾರವನ್ನು ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡಲಾಗುತ್ತಿದೆ. |
| ಈ) | ಪೌಷ್ಟಿಕ ಆಹಾರ ಗುಣಮಟ್ಟ ಕಳಪೆಯಾಗಿರುವ ಕುರಿತು ರಾಜ್ಯ ಸರ್ಕಾರಕ್ಕೆ ಇದುವರೆಗೆ ಎಷ್ಟು ದೂರುಗಳು ಸ್ವೀಕರಿಸಲಾಗಿದೆ; ದೂರುಗಳ ಆಧಾರದ ಮೇಲೆ ಯಾವ ತನಿಖೆ ನಡೆಸಲಾಗಿದೆ; | ಆದಾಗ್ಯೂ ಯಾವುದೇ ಎಂ.ಎಸ್.ಪಿ.ಸಿ.ಗಳ ವಿರುದ್ಧ ದೂರುಗಳು ಬಂದ ಕೂಡಲೇ, ಅಂತಹ ಎಂ.ಎಸ್.ಪಿ.ಸಿ.ಗಳ ಕಾರ್ಯನಿರ್ವಹಣೆಯನ್ನು ಅಮಾನತುಗೊಳಿಸಲಾಗುತ್ತದೆ.<br><br>ಸದರಿ ಎಂ.ಎಸ್.ಪಿ.ಸಿ.ಗಳು ತಮ್ಮ ನ್ಯೂನ್ಯತೆಗಳನ್ನು ಅಥವಾ ಲೋಪದೋಷಗಳನ್ನು ಸರಿಪಡಿಸಿಕೊಂಡ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸಿದ ನಂತರವೇ, ಅಂಗನವಾಡಿ ಕೇಂದ್ರಗಳಿಗೆ ಆಹಾರ ಪೂರೈಕೆ ಮಾಡಲು ಎಂ.ಎಸ್.ಪಿ.ಸಿ.ಗಳಿಗೆ ಅನುಮತಿ ನೀಡಲಾಗುತ್ತದೆ. |
| ಉ) | ಕಳಪೆ ಗುಣಮಟ್ಟದ ಆಹಾರ ಪೂರೈಕೆ ಮಾಡಿದ ಗುತ್ತಿಗೆದಾರರು/ಸಂಸ್ಥೆಗಳ ವಿರುದ್ಧ ಯಾವ ಕ್ರಮಕೈಗೊಳ್ಳಲಾಗಿದೆ; | |

| | | |
|---|---|---|
| ಊ) | ಮುಂದಿನ ದಿನಗಳಲ್ಲಿ ಗುಣಮಟ್ಟದ ಆಹಾರ ಪೂರೈಕೆ ಖಚಿತಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು? | ಅಂಗನವಾಡಿ ಕೇಂದ್ರಗಳಲ್ಲಿ ಗುಣಮಟ್ಟದ ಆಹಾರ ಪೂರೈಕೆ ಖಚಿತಪಡಿಸಲು ಸರ್ಕಾರದಿಂದ ಈ ಕೆಳಕಂಡ ಕ್ರಮಕೈಗೊಳ್ಳಲಾಗಿದೆ:<br><br>1. 2017 ರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ನಿಗದಿಗೊಳಿಸಿರುವ ಘಟಕ ವೆಚ್ಚದ ಮಿತಿಯಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ನಿಗದಿತ ಕ್ಯಾಲೋರೀಸ್, ಪ್ರೋಟೀನ್‌ಗಳನ್ನೊಳಗೊಂಡ ಅಗತ್ಯ ಪ್ರಮಾಣದ ಪೂರಕ ಪೌಷ್ಠಿಕ ಆಹಾರವನ್ನು ಯಾವುದೇ ವ್ಯತ್ಯಯವಿಲ್ಲದೆ ಸಮರ್ಪಕವಾಗಿ ಪೂರೈಸಲಾಗುತ್ತಿದೆ.<br><br>2. ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ಆಹಾರ ಪದಾರ್ಥಗಳನ್ನು ವಿತರಿಸುವ ಮುನ್ನ NABL (National Accreditation Board for Testing and Calibration Laboratories) ನಲ್ಲಿ ನೋಂದಾಯಿತವಾದ ಪ್ರಯೋಗಾಲಯಗಳ ಮೂಲಕ ಆಹಾರದಲ್ಲಿನ ಪೌಷ್ಠಿಕಾಂಶಗಳ ಗುಣಮಟ್ಟ ಮತ್ತು ನಿಯತಾಂಕಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ಉತ್ತಮ ಗುಣಮಟ್ಟದ ಪೂರಕ ಪೌಷ್ಠಿಕ ಆಹಾರವನ್ನು ಎಂ.ಎಸ್.ಪಿ.ಸಿ.ಗಳಿಂದ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡಲಾಗುತ್ತಿದೆ.<br><br>3. ಪ್ರತಿ ಅಂಗನವಾಡಿಯಲ್ಲಿ ಬಾಲವಿಕಾಸ ಸಮಿತಿ ಹಾಗೂ ಜಿಲ್ಲಾ ಮಟ್ಟದಲ್ಲಿ ಮೇಲ್ವಿಚಾರಣಾ ಸಮಿತಿಯನ್ನು ಸಹ ರಚಿಸಲಾಗಿದೆ.<br><br>4. ಇಲಾಖೆಯ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಅಂಗನವಾಡಿ ಕೇಂದ್ರಗಳ ಕುರಿತು ಕಟ್ಟುನಿಟ್ಟಿನ ಮೇಲ್ವಿಚಾರಣೆ ಮಾಡಲು ಹಾಗೂ ಜವಾಬ್ದಾರಿ ಕಾರ್ಯನಿರ್ವಹಣೆಯನ್ನು ಖಾತ್ರಿ ಪಡಿಸಿಕೊಳ್ಳಲು ಸೂಚಿಸಲಾಗಿದೆ. |

**ಸಂಖ್ಯೆ: ಮಮಇ 110 ಐಸಿಡಿ 2026**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು

# ಅನುಬಂಧ

| ಅಂಗನವಾಡಿ ಕೇಂದ್ರಗಳಲ್ಲಿ ಒದಗಿಸುತ್ತಿರುವ ಪೂರಕ ಪೌಷ್ಟಿಕ ಆಹಾರದ ವಿವರ | | | | |
|---|---|---|---|---|
| ಕ್ರ. ಸಂ | ಫಲಾನುಭವಿಗಳ ವರ್ಗ | ವಿವರ | ಅಂಗನವಾಡಿ ಕೇಂದ್ರಗಳಲ್ಲಿ ಒದಗಿಸುತ್ತಿರುವ ಪೂರಕ ಪೌಷ್ಟಿಕ ಆಹಾರ | ಪ್ರಮಾಣ ಮತ್ತು ವಿತರಣ ದಿನಗಳು |
| 1 | **06 ತಿಂಗಳಿಂದ 03 ವರ್ಷದ ಮಕ್ಕಳು** | **ಸಾಮಾನ್ಯ ಮಕ್ಕಳು** | ಪುಷ್ಟಿ, ಬೆಲ್ಲ **(THR)** | 120 ಗ್ರಾಂ, 31 ಗ್ರಾಂ 25 ದಿನಗಳು |
| | | | ಹಾಲಿನ ಪುಡಿ, ಸಕ್ಕರೆ **(THR)** | 15 ಗ್ರಾಂ, 05 ಗ್ರಾಂ 25 ದಿನಗಳು |
| | | **ತೀವ್ರ ಅಪೌಷ್ಟಿಕ ಮಕ್ಕಳು** | ಪುಷ್ಟಿ, ಬೆಲ್ಲ **(THR)** | 200 ಗ್ರಾಂ, 50 ಗ್ರಾಂ 25 ದಿನಗಳು |
| | | | ಹಾಲಿನ ಪುಡಿ, ಸಕ್ಕರೆ **(THR)** | ಸಾಮನ್ಯ ಮಕ್ಕಳಿನಂತೆ ವಾರದಲ್ಲಿ 05 ದಿನ 15 ಗ್ರಾಂ ಹಾಲಿನಪುಡಿಯೊಂದಿಗೆ ಹೆಚ್ಚುವರಿಯಾಗಿ ವಾರದಲ್ಲಿ 03 ದಿನ ದಿನಕ್ಕೆ 20 ಗ್ರಾಂ ಹಾಲಿನ ಪುಡಿ 05 ಗ್ರಾಂ ಸಕ್ಕರೆ ಮನೆಗೆ ವಿತರಿಸಲಾಗುತ್ತಿದೆ. |
| | | | ಮೊಟ್ಟೆ | ವಾರದಲ್ಲಿ 03 ದಿನಗಳು |
| | | **ಸಾಧಾರಣ ಅಪೌಷ್ಟಿಕ ಮಕ್ಕಳು** | ಪುಷ್ಟಿ, ಬೆಲ್ಲ **(THR)** | 120 ಗ್ರಾಂ, 31 ಗ್ರಾಂ 25 ದಿನಗಳು |
| | | | ಹಾಲಿನ ಪುಡಿ, ಸಕ್ಕರೆ **(THR)** | ಸಾಮನ್ಯ ಮಕ್ಕಳಿನಂತೆ ವಾರದಲ್ಲಿ 05 ದಿನ 15 ಗ್ರಾಂ ಹಾಲಿನಪುಡಿಯೊಂದಿಗ ಹೆಚ್ಚುವರಿಯಾಗಿ ವಾರದಲ್ಲಿ 03 ದಿನ ದಿನಕ್ಕೆ 20 ಗ್ರಾಂ ಹಾಲಿನ ಪುಡಿ 05 ಗ್ರಾಂ ಸಕ್ಕರೆ ಮನೆಗೆ ವಿತರಿಸಲಾಗುತ್ತಿದೆ. |
| | | | ಮೊಟ್ಟೆ | ವಾರದಲ್ಲಿ 03 ದಿನಗಳು |
| 2 | **03 ವರ್ಷದಿಂದ 06 ವರ್ಷದ ಮಕ್ಕಳು** | **ಸಾಮಾನ್ಯ ಮಕ್ಕಳು** | ಮಿಲೆಟ್ ಲಾಡು (ಬೆಳಗಿನ ಉಪಹಾರ) | 40 ಗ್ರಾಂ, 25 ದಿನಗಳು |
| | | | ರವಾ ಉಪ್ಪಿಟ್ಟು (ಮಧ್ಯಾಹ್ನದ ಬಿಸಿಯೂಟ) | 90 ಗ್ರಾಂ, 09 ದಿನಗಳು |
| | | | ರವಾ ಪಾಯಸ (ಮಧ್ಯಾಹ್ನದ ಬಿಸಿಯೂಟ) | 90 ಗ್ರಾಂ, 04 ದಿನಗಳು |
| | | | ಅನ್ನ ಸಾಂಬಾರ್ (ಮಧ್ಯಾಹ್ನದ ಬಿಸಿಯೂಟ) | 90 ಗ್ರಾಂ, 12 ದಿನಗಳು |
| | | | ಹಾಲು, ಸಕ್ಕರೆ | 150 ಮಿ.ಲಿ, 05 ಗ್ರಾಂ 25 ದಿನಗಳು |
| | | | ಮೊಟ್ಟೆ | ವಾರದಲ್ಲಿ 02 ದಿನ |
| | | **ತೀವ್ರ ಅಪೌಷ್ಟಿಕ ಮಕ್ಕಳು** | ಮಿಲೆಟ್ ಲಾಡು (ಬೆಳಗಿನ ಉಪಹಾರ) | 40 ಗ್ರಾಂ, 25 ದಿನಗಳು |
| | | | ರವಾ ಉಪ್ಪಿಟ್ಟು (ಮಧ್ಯಾಹ್ನದ ಬಿಸಿಯೂಟ) | 90 ಗ್ರಾಂ, 09 ದಿನಗಳು |
| | | | ರವಾ ಪಾಯಸ (ಮಧ್ಯಾಹ್ನದ ಬಿಸಿಯೂಟ) | 90 ಗ್ರಾಂ, 04 ದಿನಗಳು |
| | | | ಅನ್ನ ಸಾಂಬಾರ್ (ಮಧ್ಯಾಹ್ನದ ಬಿಸಿಯೂಟ) | 90 ಗ್ರಾಂ, 12 ದಿನಗಳು |
| | | | ಹಾಲು, ಸಕ್ಕರೆ | ಸಾಮನ್ಯ ಮಕ್ಕಳಿನಂತೆ ವಾರದಲ್ಲಿ 05 ದಿನ 15 ಗ್ರಾಂ ಹಾಲಿನಪುಡಿಯೊಂದಿಗ ಹೆಚ್ಚುವರಿಯಾಗಿ ವಾರದಲ್ಲಿ 03 ದಿನ ದಿನಕ್ಕೆ 20 ಗ್ರಾಂ ಹಾಲಿನ ಪುಡಿ 05 ಗ್ರಾಂ ಸಕ್ಕರೆ ಮನೆಗೆ ವಿತರಿಸಲಾಗುತ್ತಿದೆ. |
| | | | ಮೊಟ್ಟೆ | ವಾರದಲ್ಲಿ 05 ದಿನ |
| | | | ಪುಷ್ಟಿ, ಬೆಲ್ಲ **(THR)** | 80 ಗ್ರಾಂ, 20 ಗ್ರಾಂ 25 ದಿನಗಳು |

| ಕ್ರ. ಸಂ | ಫಲಾನುಭವಿಗಳ ವರ್ಗ | ವಿವರ | ಅಂಗನವಾಡಿ ಕೇಂದ್ರಗಳಲ್ಲಿ ಒದಗಿಸುತ್ತಿರುವ ಪೂರಕ ಪೌಷ್ಟಿಕ ಆಹಾರ | ಪ್ರಮಾಣ ಮತ್ತು ವಿತರಣ ದಿನಗಳು |
|---|---|---|---|---|
| | | ಸಾಧಾರಣ ಅಪೌಷ್ಟಿಕ ಮಕ್ಕಳು | ಮಿಲೆಟ್ ಲಾಡು (ಬೆಳಗಿನ ಉಪಹಾರ) | 25 ಗ್ರಾಂ, 25 ದಿನಗಳು |
| | | | ರವಾ ಉಪ್ಪಿಟ್ಟು (ಮಧ್ಯಾಹ್ನದ ಬಿಸಿಯೂಟ) | 110 ಗ್ರಾಂ, 09 ದಿನಗಳು |
| | | | ರವಾ ಪಾಯಸ (ಮಧ್ಯಾಹ್ನದ ಬಿಸಿಯೂಟ) | 110 ಗ್ರಾಂ, 04 ದಿನಗಳು |
| | | | ಅನ್ನ ಸಾಂಬಾರ್ (ಮಧ್ಯಾಹ್ನದ ಬಿಸಿಯೂಟ) | 110 ಗ್ರಾಂ, 12 ದಿನಗಳು |
| | | | ಹಾಲು, ಸಕ್ಕರೆ | ಸಾಮನ್ಯ ಮಕ್ಕಳಿನಂತೆ ವಾರದಲ್ಲಿ 05 ದಿನ 15 ಗ್ರಾಂ ಹಾಲಿನಪುಡಿಯೊಂದಿಗೆ ಹೆಚ್ಚುವರಿಯಾಗಿ ವಾರದಲ್ಲಿ 03 ದಿನ ದಿನಕ್ಕೆ 20 ಗ್ರಾಂ ಹಾಲಿನ ಪುಡಿ 05 ಗ್ರಾಂ ಸಕ್ಕರೆ ಮನೆಗೆ ವಿತರಿಸಲಾಗುತ್ತಿದೆ. |
| | | | ಮೊಟ್ಟೆ | ವಾರದಲ್ಲಿ 05 ದಿನ |
| 5 | ಗರ್ಭಿಣಿ ಮತ್ತು ಬಾಣಂತಿಯರು (THR) | - | ಅಕ್ಕಿ | 1000 (ಮಾಸಿಕ ಪ್ರಮಾಣ ಗ್ರಾಂ.ಗಳಲ್ಲಿ) |
| | | | ಗೋಧಿ | 750 (ಮಾಸಿಕ ಪ್ರಮಾಣ ಗ್ರಾಂ.ಗಳಲ್ಲಿ) |
| | | | ಮಿಲ್ಲೆಟ್ ಲಾಡು ಮಿಕ್ಸ್ | 1800 (ಮಾಸಿಕ ಪ್ರಮಾಣ ಗ್ರಾಂ.ಗಳಲ್ಲಿ) |
| | | | ತೊಗರಿ ಬೇಳೆ | 250 (ಮಾಸಿಕ ಪ್ರಮಾಣ ಗ್ರಾಂ.ಗಳಲ್ಲಿ) |
| | | | ಸಾಂಬಾರ್ ಮಸಾಲ | 125 (ಮಾಸಿಕ ಪ್ರಮಾಣ ಗ್ರಾಂ.ಗಳಲ್ಲಿ) |
| | | | ಹಾಲಿನ ಪುಡಿ, | 375 (ಮಾಸಿಕ ಪ್ರಮಾಣ ಗ್ರಾಂ.ಗಳಲ್ಲಿ) |
| | | | ಮೊಟ್ಟೆ | 25 ಸಂಖ್ಯೆ |